ವಾಗಿ ಚುನಾವಣೆಯ ಅಧಿಕಾರಿಗಳನ್ನು ಕಾಂಟ್ಯಾಕ್ಟ್ ಮಾಡಿ ನನಗೆ ಈ ವಿಷಯಗಳನ್ನು ತಿಳಿಸ ಬೇಕೆಂದು ಹೇಳಿದ್ದೇನೆ. ಈಗ 5 ನಿಮಿಷಗಳ ಹಿಂದೆ ನೇರವಾಗಿ ನಾನು ಡೆಪ್ಯುಟಿ ಡೆವಲಪ್‌ಮೆಂಟ್ ಕಮಿಷನರ್, ಡೆಪ್ಯುಟಿ ಸೆಕ್ರೆಟರಿಯವರಲ್ಲಿ ಮಾತನಾಡಿದ್ದೇನೆ. ಅವರು ಕೊಚ್ಚಿರುವ ವರದಿಯ ಪ್ರಕಾರ ಈ ತಿಂಗಳ ಕೊನೆಯಲ್ಲಿ ಮತ ಪಟ್ಟಿ ಸಿದ್ಧವಾಗುತ್ತದೆ ಅದು ಸಿದ್ಧವಾದ ಕೂಡಲೇ ಲಿಖಿತ ಮೂಲಕ ಎಲ್ಲರಿಗೂ ತಿಳಿಸುತ್ತೇನೆ. ಪಾಸನಸಭೆಗಳು ಇಲ್ಲದೇ ಹೋದರೆ ಈ ದಿನದಿಂದ 45 ದಿವಸಗಳೊಳಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಚುನಾವಣೆಯನ್ನು ನಡೆಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದರೆ ಸರ್ಕಾರಕ್ಕೆ ಇದನ್ನು ಮುಂದುವರಿಸಬೇಕೆಂಬ ಉದ್ದೇಶವಿಲ್ಲ. ಇನ್ನು ಕೆಲವು ಸದಸ್ಯರು ಸಲಹಾ ಸಮಿತಿಗಳನ್ನು ಮಾಡಬೇಕೆಂದು ಹೇಳಿದರು. ಇದನ್ನು ಮೊದಲು ಮಾಡತಕ್ಕದ್ದು ಇಲ್ಲವೆಂದು ಭರವಸೆ ಕೊಟ್ಟಿದ್ದೇನೆ. ಈಗಲೂ ಕೂಡ ಅದು ನನ್ನ ಮುಂದೆ ಇಲ್ಲ.

ಶ್ರೀ ಎಸ್. ಎಂ. ಶಿರಾಳಿ ಚಂದ್ರಶೇಖರ್.—ನಮ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಾಟರ್ ಸಪ್ಲೈ ಬೋರ್ಡಿನ ಚೇರ್‌ಮನ್ ಅವರು ಸರ್ಕಾರಕ್ಕೆ .....

ಅಧ್ಯಕ್ಷರು.—ನೀವು ನನಗೆ ಅದರ ಬಗ್ಗೆ ನೋಟೀಸ್ ಕಳುಹಿಸಿದ್ದೀರಾ ?

ಶ್ರೀ ಎಸ್. ಎಂ. ಶಿರಾಳಿ ಚಂದ್ರಶೇಖರ್.—ನಿನ್ನೆ ಕಾಗದ ಕಳುಹಿಸಿದ್ದೇನೆ.

ಅಧ್ಯಕ್ಷರು.—ಎಷ್ಟು ಹೊತ್ತಿನಲ್ಲಿ ?

ಶ್ರೀ ಎಸ್. ಎಂ. ಶಿರಾಳಿ ಚಂದ್ರಶೇಖರ್.—ನಿನ್ನೆ ಸಾಯಂಕಾಲ ಆಫೀಸಿನಲ್ಲಿ ಕೊಟ್ಟು ಬಂದಿದ್ದೇನೆ.

ಅಧ್ಯಕ್ಷರು.—ನಾನು ಒಂದು ಗಂಟೆ ಮುಂಚಿತವಾಗಿಯೇ ಬಂದಿದ್ದೇವೆ. ಮಾನ್ಯ ಸದಸ್ಯರು ಕಾರ್ ಅಟೆನ್ಷನ್ ನೋಟೀಸ್‌ನ್ನು ಕಳುಹಿಸಿದ್ದಾರೆ. ಇಲ್ಲಿ ಅವರ ಬಗ್ಗೆ ಹೇಳುವುದಕ್ಕೆ ಮುಂಚೆ ನನಗೆ ನೋಟೀಸನ್ನು ಕೊಡಬೇಕು.

ಶ್ರೀ ಎಸ್. ಎಂ. ಶಿರಾಳಿ ಚಂದ್ರಶೇಖರ್.—ನಾನು ನಿನ್ನೆಯೇ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಆಫೀಸಿನಲ್ಲಿ ಏನೂ ಬಂದಿಲ್ಲವೆಂದು ಹೇಳುತ್ತಾರೆ. ಆಫೀಸರ್ಸ್ ಇರುವುದು ಏತಕ್ಕೆ ? ನಾನು ಹೇಳುವುದರಲ್ಲಿ ಏನಾದರೂ ವ್ಯತ್ಯಾಸವಿದ್ದರೆ ನಾನು ಕೂತುಕೊಳ್ಳುತ್ತೇನೆ. ನಾನು ಆ ನೋಟೀಸನ್ನು ನೋಡಿದ್ದೇನೆ. ಏಕೆಂದರೆ ಅವರು ಇಲ್ಲಿ ಏನು ಹೇಳುತ್ತಾರೋ ಅದು ನನಗೆ ಪೂರ್ವಭಾವಿಯಾಗಿ ಗೊತ್ತಾಗಬೇಕು. ನೋಟೀಸ್ ಕೊಡುವುದು ಏತಕ್ಕೂ ನಾನು ಅವರಿಗೆ ಅವರ ಬಗ್ಗೆ ಅನುಮತಿ ಕೊಟ್ಟಿದೆನೋ ಇಲ್ಲವೋ ಎಂಬುದು ಗೊತ್ತಾಗಬೇಕು. ಅದೇನೂ ಗೊತ್ತಿಲ್ಲದೆ ಅವರು ಮಾತನಾಡಲು ಅವಕಾಶ ಕೊಡಬೇಕು ಎಂಬುದಾಗಿ ಕೇಳಿದರೆ, ಆ ರೀತಿ ಈಗ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ನಾಳೆದಿನ ಬೇಕಾದರೆ ಅದರ ಬಗ್ಗೆ ಮಾತನಾಡ ಬಹುದು.

(iii) death of Sri Sathyan at Cunningham Road, Bangalore.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಬೆಂಗಳೂರಿನಲ್ಲಿ ನಡೆದಂಥ ನಿವೃತ್ತ ಕರ್ನಲ್ ಸತ್ಯನ್ ಅವರ ಸಾವಿನ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೆ. ಕೆಲವು ವಿಷಯಗಳ ಬಗ್ಗೆ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ತಾವೇನೂ ಅನುಮಾನ ಮಾಡಬೇಕಾಗಿಲ್ಲ. ತನಿಖೆ ನ್ಯಾಯವಾಗಿಯೇ ನಡೆಯುತ್ತಿದೆ ಅದರ ಚರಿತ್ರೆ ಹೊರಗೆ ಬರುತ್ತದೆ. ಅದರ ಬಗ್ಗೆ ಸಂಶಯ ಬೇಕಿಲ್ಲ ಎಂಬುದಾಗಿ ಹೇಳಿದಮೇಲೆ ನನಗೆ ಇದ್ದಂಥ ಸಂಶಯವನ್ನು ಅವರ ಗಮನಕ್ಕೆ ತಂದಿದ್ದೆ. ಇವತ್ತಿನ ದಿವಸ ಅವರ ಒಂದು ವರದಿಯ ಪ್ರಕಾರ ನಮ್ಮ ಸಂಶಯ ಖಚಿತಪಟ್ಟಿದೆ. ಈಗ ಪೋಲೀಸ್ ತನಿಖೆಯೂ ಸಹ ಹೊರಬರುತ್ತಿದೆ. ಇವತ್ತು ಇದು ಇಂತಹ ಒಬ್ಬ ಶ್ರೀಮಂತರ ಮನೆಯಲ್ಲಿ ನಡೆದಂಥ ಘಟನೆ. ಯಾಗಿ ಪತ್ರಿಕೆಯಲ್ಲಿ ಪೋಲೀಸರ ಮುಖ್ಯಾಂತರ ವರದಿಗಳು ಬರುತ್ತವೆ. ಕೊಲೆಗಳ ವಿಚಾರವನ್ನು ಮುಖಪತ್ರಿಕೆಯಲ್ಲಿ ಕೊಡುವ ಹವ್ಯಾಸವನ್ನು ನಾವು ನೋಡಿಲ್ಲ. ಈ ವಿಷಯವನ್ನು ಮೊದಲು ಸಂಕ್ಷಿಪ್ತವಾಗಿ ವ್ಯಕ್ತಪಡಿಸಿದ್ದರು. ತದನಂತರ ಈ ವಿಷಯಗಳು ವರ್ಬಟಿಮ್ ಆಗಿ ಬರುತ್ತಿವೆ ಮೇರಾಗಿ ಇವತ್ತು ಅತ್ಯಪತ್ಯವೆಂದು ಹೇಳುತ್ತಾರೆ. ಆ ರೀತಿಯಾಗಿ ಫಿಂಗರ್‌ಪ್ರಿಂಟ್ಸ್ ಎಕ್ಸ್‌ಪರ್ಟ್ಸ್ ಹೇಳುತ್ತಾರೆ. ಅವರ ರಿವಾಲ್ವಾರ್‌ನಲ್ಲಿ ಹಾಗೂ ಅವರ ಪೆನ್ನುಗಳಲ್ಲಿ ಫಿಂದಗರ್‌ಪ್ರಿಂಟ್ಸ್ ಕಂಡು

ಬರುವುದಿಲ್ಲ. ಹೀಗಿರುವಾಗ ಯಾವ ಕಾರಣದಿಂದ ಪೋಲೀಸ್ ವರದಿಗಳು ಬರುತ್ತಿವೆ. ನನಗೆ ಇದರ ವಿಷಯ ಗೊತ್ತಾಗುತ್ತಾ ಇಲ್ಲ. ಪೋಲೀಸಿನವರೇ ಪತ್ರಿಕೆಗಳಿಗೆ ಅವರ ತನಿಖೆಗಳನ್ನು ಹೊರಗೆಡವುದಕ್ಕೇನು ಕಾರಣವಿತ್ತು? ಸಾರ್ವಜನಿಕರಲ್ಲಿ ಇದರ ಬಗ್ಗೆ ಇರತಕ್ಕ ಕುತೂಹಲವನ್ನು ಮುಚ್ಚಿ ಹಾಕುವುದಕ್ಕೆ ಪೋಲೀಸ್ ಇಲಾಖೆಯವರು ಮಾಡಿಕೊಂಡಿರತಕ್ಕ ಕುತಂತ್ರವೆಂದು ನಾನು ಈ ಸಂದರ್ಭದಲ್ಲಿ ಆಪಾದನೆಯನ್ನು ಮಾಡಬೇಕಾಗುತ್ತದೆ. ಅಲ್ಲಿ ಯಾವರೀತಿ ಅಪರಾಧಗಳು ಆಗಿವೆ, ಯಾರು ಅಪರಾಧಿಗಳು ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಅಪರಾಧ ಏನೂ ಇಲ್ಲ ವೆಂದು ಹೇಳುವುದಕ್ಕಾಗುವುದಿಲ್ಲ. ಸತ್ಯವಿರುವುದನ್ನು ಹೊರಗೆಡಹಬೇಕು. ಅದು ಹೊರಗಡೆಗೆ ಬರಬೇಕು. ಏಕೆಂದರೆ ಈಗ ನೀವು ಯಾರನ್ನು ಇದರ ಬಗ್ಗೆ ತರಿಬಿಮಾಡುವುದಕ್ಕೆ ನಿರ್ವಹಿಸಿದ್ದಿರೋ ಅವರಿಂದ ನಿಜಾಂಶ ಹೊರಬರುವುದಿಲ್ಲ. ದಯವಿಟ್ಟು ಬೇರೆಯವರ ಮುಖಾಂತರ ಇದನ್ನು ತನಿಖೆ ಮಾಡಿಸಬೇಕು. ಎರಡನೆಯದಾಗಿ ಈ ಒಂದು ಘಟನೆಯಲ್ಲಿ ಕೆಲವು ಉನ್ನತ ಪೋಲೀಸ್ ಅಧಿಕಾರಿ ಗಳು ಸೇರಿದ್ದಾರೆ. ಅಪರಾಧಿ ಬಗ್ಗೆ ಸಹಾನುಭೂತಿಯನ್ನು ಉಲ್ಲೇಖಿಸಿದ್ದಾರೆಂದು ನನಗೆ ತಿಳಿದು ಬಂದಿದೆ. ಯಾರಲ್ಲಿ ಸಂತಯ ಬರುತ್ತದೋ ಅಂತಹವರನ್ನೂ ಕೂಡ ದಸ್ತಗಿರಿಮಾಡಲಿಲ್ಲ. ಅಲ್ಲಿ ಅವರಿಗೆ ಹೊರಗಡೆಯಿಂದ ಜಾಮೀನು ಪೋಲೀಸ್ ಮುಖಾಂತರ ಕರೆಸಿಕೊಂಡು ಪೋಲೀಸರು ದುಡ್ಡು ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿದ್ದಾರೆ. ನನಗೆ ಅನುಮಾನ ಹೀಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ನಮ್ಮ ಅನುಮಾನವನ್ನು ಪರಿಹಾರಮಾಡುವುದಕ್ಕೆ ಮತ್ತು ನಿಜಾಂಶವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನಪಡುತ್ತಾರೆಯೇ ಇಲ್ಲವೇ ಎಂಬುದನ್ನು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ತಿಳಿಸಬೇಕು.

† ಶ್ರೀ ಡಿ. ದೇವರಾಜ ಅರಸ್.—ಇದರ ಬಗ್ಗೆ ನಾನು ಒಂದು ಹೇಳಿಕೆಯನ್ನು ಕೊಡೋಣ ವೆಂದು ಇದ್ದೇನೆ. ಅದರ ಜೊತೆಯಲ್ಲಿ ಅವರ ಅನುಮಾನ ಏನಿದೆಯೆಂಬುದನ್ನು ಸ್ವಲ್ಪ ವಿಶದಪಡಿಸಿ ಅವರ ಸಂತಯಕ್ಕೆ ಕಾರಣವಿಲ್ಲವೆಂದು ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಮೊದಲು ನನ್ನ ಒಂದು ಸ್ಟೇಟ್‌ಮೆಂಟನ್ನು ಓದಿ ಕೆಲವು ವಿಷಯಗಳನ್ನು ಪ್ರಸ್ತಾಪಮಾಡುತ್ತೇನೆ. ಅದು ಈ ರೀತಿ ಇದೆ: — Very early on the morning of 28th March 1975, Smt. Rajalaxmi Satyan, resident of Defence Colony, Indiranagar reported at Cubbon Park Police Station that on the previous night on 27th March 1975 at about 11-30 p.m. when she was in the House of Sri Rajesh at Cunningham Road preparing herself to accompany him to Ooty, her husband Col. Satyan came there and tried to dissuade her from going to Ooty. When she did not agree he shot himself with a revolver and died. A case of unnatural death was registered in Cubbon Park Police Station and investigation was taken up. On the evening of 27th March 1975 when Smt. Rajalaxmi was in her daughter's house at Indiranagar along with her son, her family friend Sri Rajesh, a Coffee Planter of Arcot of Salem District went there and told her that he was leaving for Ooty that night. As her parents wanted to see her she told him that she will accompany him to Ooty. On some earlier occasions she had travelled with him to Ooty. Thereafter they visited a friend's house and later had a dinner in a hotel and went to the flat of Sri Rajesh at Cunningham road at about 11-30 p.m. When Sri Rajesh was packing up his thing Col Satyan walked into the room with a revolver in his hand and began shouting at his wife asking her not to go. Sri Rajesh intervened the Col. Satyan pushed him aside abusing him and asking him to keep himself out of this affair, Sri Rajesh went inside the bathroom and bolted it from inside. Then a wordy dual took place between the dusband and the wife when Col. Satyan shot himself and feel down dead. Mrs. Satyan feeling aghast examined the pulse. She then removed the revolver and the wrist watch from Satyan's hands and placed them on the dressing table. She did not find Rajesh anywhere there. After bolting the door of the

bothroom from inside he had escaped from the ventilator, Mrs. Satyan drove to her house at Indiranagar but finding that her son and daughter were not there she retrned to the scene of occurrence and again went to Dr. Bhagaven's house (Dr, Bhagavan is the brother of Col Satyan:). She narrated to Bhagavan's wife what hed happened and they returned to the scence of occurrence, Later the matter was reported to senior police officers and on their advice it was reported to the Cubbon Park police station. The jurisdictional officers and other police officers forensic and fingerprint experts went to the scene. The investigation has disclosed the following facts. Sri Rajesh is the Managing Partner of a leading Coffee Exporting Firm and is a resident of Yercaud Salem District He is having his local office in Bangalore at the first floor flat No. 31/2 Cunningham Road. The flat is also being used as a residence by the partners of the firmr during their visit to for coffee auctions. A watchman by name John has employed in the office. He is also working as a cook Sri Rajesh knew Col Satyan for the last 18 years and he is an intimate family friend. Col Satyan retired from Military about 5 years ago and was getting a monthly Rs. 380 p.m After retirement he tried his hand in tus ness ventures but all of them proved unsuccessful. He was a member of a number of clubs in Bangalore and his monthly club bills used to be very high. Due to setback in life he used to be moody and depressed. His brother Dr. Bhagvan had advised him to give up drinking. In the last few months he was not normal on account of his financial difficulties as well of as domestic unhappiness. About three months back in one of his depressed moment he had enacted a scene and he had threatened to shoot himself with a revolver for which he had no licence. On account of business failure, and fast life he became indebted to the tune of Rs. 90 000. Mrs. Satyan had told her husband that she was taking up an appointment in Rishi Valley and had asked him to concenecate on his new venture of indus rial security set-up. She had also told him that she would join him afterwards. Col Satyan did not relish his wife going away. It was in that situation she had decided to go to Ooty, There were no signs of struggle and the doctor who had conducted the autopsy was of the opinion that death was due to shock and hremorrhage. The ballistic experts had given the opinion that the range of firing was within six inches from the chest. The investigation was being conducted by the Deputy Commissioner of Police, Crime Law and Order. The Commissioner of Police was also keeping a watch. The facts as disclosed in the investigation are indicative of suicide. Investigation is still proceeding ಮಾನ್ಯ ಅಧ್ಯಕ್ಷರೇ ಈ ಕೇಸಿಗೆ ಸಂಬಂಧಪಟ್ಟ ವಿಚಾರಗಳು ಇದಕ್ಕಿಂಥ ಹೆಚ್ಚಿಗೆ ನಾನು ಹೇಳುವಂಥ ಪರಿಸ್ಥಿತಿಯಲ್ಲಿ ಇಲ್ಲ. ಏತಕ್ಕೆಂದರೆ ಹೆಚ್ಚಿಗೆ ವಿಚಾರ ಗೊತ್ತಿಲ್ಲ. ನಮಗೆ ಇಷ್ಟುಮಾತ್ರ ಕಂಡುಬಂದಿದೆ. ಈ ಕೇಸಿನಲ್ಲಿ ಇನ್‌ವೆಸ್ಟಿಗೇಷನ್ ನಡೆಯುವ ಕಾಲದಲ್ಲಿ ಎಲ್ಲವನ್ನೂ ಬಹಿರಂಗವಾಗಿ ಚರ್ಚೆಮಾಡುತ್ತಾ ಹೋದರೆ

ಇನ್‌ವೆಸ್ಟಿಗೇಷನ್‌ನಲ್ಲಿ ನಿಜವಾದ ಸತ್ಯವನ್ನು ಕಂಡುಹಿಡಿಯುವುದಕ್ಕೆ ಅವಕಾಶವಿರುತ್ತದೆ. ಎರಡನೇಯದು ನಾನು ಇದನ್ನು ಹೇಳುವಾಗ ಮಾನ್ಯ ಸದಸ್ಯರು ಗಳಿಗೆ ಏನಾದರೂ ಗೊತ್ತಿದ್ದರೆ ನಮಗೆ ಗೊತ್ತಿದೆ ಎನ್ನುವುದಾದರೆ ನಾನು ಒಂದು ಸಲಹೆ ನೀಡುತ್ತೇನೆ. ಪತ್ರಿಕೆಗಳ ಆಧಾರದ ಮೇಲೆ ತಿಳಿಸುವುದಾದರೆ ಅದು ಒಂದು ವಿಚಾರ. ಪತ್ರಿಕೆಗಳಿಗೆ ಪೋಲೀಸರು ವರದಿಯನ್ನು ಕೊಟ್ಟಿಲ್ಲ. ನೆನ್ನೆ ಕೊಟ್ಟಿದ್ದಾರೆಂದು ಹೇಳುವುದು ಸರಿಯಲ್ಲ. ಅಧಿಕೃತವಾಗಿ ಹೇಳುವುದಾದರೆ ಇದು ಮೊದಲನೆಯದು.

ಶ್ರೀ ಸಿ. ಬೈರೇಗೌಡ.—ಬುಲಟ್ ಸಿಕ್ಕಿಲ್ಲ ಎಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ದಯವಾಡಿ ಕಿವಿಯನ್ನು ನೇರವಾಗಿ ಇಟ್ಟುಕೊಂಡು ಕೇಳಬೇಕು ಎಂದು ನನ್ನ ಪ್ರಾರ್ಥನೆ.

ಶ್ರೀ ವಿ. ಎನ್. ಪಾಟೀಲ್.—ಪೋಲೀಸ್ ಬುಲೆಟಿನ್‌ನಲ್ಲಿ ವಿವರಗಳನ್ನು ಕೊಟ್ಟಿಲ್ಲ.

ಶ್ರೀ ಡಿ. ದೇವರಾಜ ಅರಸ್,—ತಾವೆಲ್ಲಾ ಕ್ರಿಮಿನಲ್ ಕೇಸ್ ನಡೆಸಿದ್ದೀರಿ ದೇವರು? ಒಳ್ಳೆ ಕಥೆ ಆಗಿದೆಯೇ! ಕೋರ್ಟಿನಲ್ಲಿ ವಾದಮಾಡಿಕೊಂಡು ಕುಳಿತಹಾಗೆ ಇಲ್ಲಿ ಕೂತರೆ ಹೇಗೆ? ನಾನು ಡಿಫೆನ್ಸ್ ಲಾಯರು ಅಲ್ಲ, ಕ್ರಿಮಿನಲ್ ಲಾಯರು ಅಲ್ಲ.

2-30 P.M.

ನಿನ್ನೆಯ ಬುಲೆಟಿನ್‌ನಲ್ಲಿ ಪರಿಸ್ಥಿತಿಯನ್ನು ಕೊಟ್ಟಿರುವುದು ಇದೆ. ಅದು ಅಧಿಕೃತವಾಗಿ ಬಂದಿರುವ ಪೋಲೀಸ್ ವರದಿ. ಅದರ ಹಿಂದೆ ಏನೇನು ಪತ್ರಿಕೆಯವರು ಬರೆದುಕೊಂಡಿದ್ದಾರೋ, ಅವರು ಎಲ್ಲೆಲ್ಲಿಂದ ಕೇಳಿ ತಿಳಿದುಕೊಂಡು ಬರೆದುಕೊಂಡರೋ ಅದಕ್ಕೆ ಪೋಲೀಸ್ ಇಲಾಖೆ ಜವಾಬ್ದಾರಿಯಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಒಂದುವೇಳೆ ಪತ್ರಿಕೆಯಲ್ಲಿ ಬಂದಿರತಕ್ಕ ವರದಿಯ ಆಧಾರದಮೇಲೆ, ಪತ್ರಿಕಾ ವರದಿಯನ್ನು ನಂಬುವುದಕ್ಕೆ ಸಾಧ್ಯವಿದೆ, ನಮಗೆ ಸಾಕಷ್ಟು ಮಾಹಿತಿ ಇದೆ. ಪೋಲೀಸ್ ಇಲಾಖೆ ಏನೋ ಗೋಲ್‌ಮಾಲ್ ನಡೆಸುತ್ತಿದೆ ಎನ್ನುವ ಅನುಮಾನ ತಮಗೆ ಇದ್ದರೆ ನಾನು ತಾವು ಹೇಳುವುದು ಎಲ್ಲಾ ಸರಿಯೆಂದು ಹೇಳುವಂಥ ಪರಿಸ್ಥಿತಿಯಲ್ಲಿ ನಾನು ಇಲ್ಲ. ಒಂದುವೇಳೆ, ತಮಗೇನಾದರೂ ಹೆಚ್ಚಿನ ಮಾಹಿತಿ ಇದ್ದರೆ, ನಾನು ಮಾನ್ಯ ಸ್ನೇಹಿತರಲ್ಲಿ ಕೇಳಿಕೊಳ್ಳುತ್ತೇನೆ, ದಯವಾಡಿ ಅದನ್ನು ನನಗೆ ತಿಳಿಸಿ ಎಂದು. ಅಲ್ಲದೆ ತಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ. ಸರ್ಕಾರಕ್ಕೆ ಯಾರನ್ನೇ ಆಗಲೀ ಮುಚ್ಚಬೇಕು, ಯಾರಿಗಾದರೂ ನಾವು ರಕ್ಷಣೆ ಕೊಡಬೇಕು ಎನ್ನತಕ್ಕ ಉದ್ದೇಶ ನಮಗಿಲ್ಲ: ಎನ್ನುವುದನ್ನು ತಾವು ಒಪ್ಪುವುದಾದರೆ ತಮಗೆ ಏನಾದರೂ ವಿಚಾರಗಳು ಗೊತ್ತಿದ್ದರೆ, ನನಗೆ ಹೇಳಿ, ತಾವು ಬಹಿರಂಗವಾಗಿ ತಿಳಿಸುವುದಾದರೆ ಇನ್‌ವೆಸ್ಟಿಗೇಷನ್ ಹೇಗೆ ನಡೆಯುತ್ತದೆ? ನಮ್ಮ ಅಧಿಕಾರಿಗಳು ಯಾರಾದರೂ ತಮಗೆ ನಂಬುವುದಕ್ಕೆ ಅರ್ಹರಿಲ್ಲವೇ? ನಮ್ಮ ಪೋಲೀಸ್ ಉನ್ನತ ಅಧಿಕಾರಿಗಳು ಇದರ ಇನ್‌ವೆಸ್ಟಿಗೇಷನ್ ಅನ್ನು ನಡೆಸುತ್ತಿದ್ದಾರೆ. ಇದರ ಮೇಲೆ ತಮಗೆ ನಂಬಿಕೆ ಇಲ್ಲವೇ? ಬಿ ಪತ್ರಿಕಾ ವರದಿಯ ಮೇಲೆ ತಾವು ಹೋಗಬೇಡಿ. ಎಲ್ಲರ ಮೇಲೂ ಇವರು ಮೋಸಗಾರರು, ಇವರು ಮೋಸಗಾರರು ಎಂದು ಹೇಳಿದರೆ ಹೇಗೆ? ನಾವು ನೀವು ಇನ್‌ವೆಸ್ಟಿಗೇಷನ್ ಮಾಡುವುದ ಕ್ಕಾಗುತ್ತದೆಯೇ? ಪೋಲೀಸರನ್ನು ಕಳುಹಿಸಬೇಕಾಗುತ್ತದೆ. ತಮಗೆ ಅನುಮಾನ ಇದ್ದರೆ ನಮಗೆ ತಿಳಿಸಿ. ತಾವು ಹೇಳುವುದು ನಿಜಾಂಶ ಇದ್ದರೂ ಇರಬಹುದು. ಸರ್ಕಾರಕ್ಕೆ ಯಾರನ್ನಾದರೂ ಮುಚ್ಚಬೇಕು. ಅವರನ್ನು ಶಿಕ್ಷೆಯಿಂದ ತಪ್ಪಿಸಬೇಕು, ಎನ್ನುವ ಉದ್ದೇಶ ಖಂಡಿತವಾಗಿಯೂ ನಮಗಿಲ್ಲ. ತಾವು ಪೋಲೀಸರ ವರದಿಯನ್ನು ಕಲರ್ಡ್ ವರ್ಷನ್ ಎಂದು ಹೇಳುವುದಕ್ಕೆ ನಿಮಗೆ ಏನು ಆಧಾರ ಇದೇ ನೀವು ಅವರು ಇವರು ಹೇಳಿದ್ದನ್ನು ಕೇಳಿ ಹೇಳುತ್ತೀರಿ. ಪೋಲೀಸ್ ರಿಕಾರ್ಡ್‌ಗೆ ಇನ್‌ವೆಸ್ಟಿಗೇಷನ್ ಮುಖೇನ ಬಂದಿರತಕ್ಕದ್ದು. It is all mere hearsay Unless there is sufficient evidence for us to suspect that the police officers have connived at this and they are cooking up in which event I would request them to kindly let me know whatever evidence they have to suspect them or make us doubt the integrity of the officer who was directly investigating this case in which event let us see what other remedy we can think of.

ಶ್ರೀ ಎಸ್. ಎಂ. ಶ್ರೀನಿವಾಳ ಚಂದ್ರಶೇಖರ್.—ಸಾಮಾನ್ಯವಾಗಿ ಸ್ವಂತ ಪಿಸ್ತೂಲು ಇಟ್ಟವರಿಗೆ ಈ ವಿಷಯ ಗೊತ್ತಾಗುತ್ತದೆ. ಪಿಸ್ತೂಲಿನಿಂದ ಹೊಡೆದುಕೊಳ್ಳಬೇಕಾದರೆ, ಅವನ್ನು ತನ್ನ ತಲೆಗೆ ಹೊಡೆದುಕೊಳ್ಳಬೇಕಾಗುತ್ತದೆ. ಅನೇಕ ಮರ್ಡರ್ ಕೇಸುಗಳಲ್ಲಿ ನಾವು ಕೇಳಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಇದು ಕೋರ್ಟ್ ಅಲ್ಲ, ಇಲ್ಲಿ ವಾದವಿವಾದ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇವರ ಬಗ್ಗೆ ತಮಗೆ ಗೊತ್ತಿದ್ದ ವಿಷಯವನ್ನು ತಿಳಿಸಿದ್ದಾರೆ. ಅಲ್ಲದೆ ನಮ್ಮ ಹತ್ತಿರ ಏನಾದರೂ ವಿಷಯಗಳು ಇದ್ದರೆ ತಮಗೆ ತಿಳಿಸಬಹುದೆಂದೂ ಹೇಳಿದ್ದಾರೆ, ನಮಗೆ ಅನುಮಾನ ಬಂದಿರತಕ್ಕ ಒಂದು ಮಾತನ್ನು ಹೇಳುತ್ತೇನೆ. ಬಹಳಷ್ಟು ಕೇಸುಗಳಲ್ಲಿ ನಿರ್ಣಯಮಾಡತಕ್ಕ ಅಭಿಪ್ರಾಯ ಎಂದರೆ ಜನತಾ ಅಭಿಪ್ರಾಯ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಇದು ಕೋರ್ಟ್ ಅಲ್ಲವೆಂದು ಹೇಳಿದಾಗ, ತಮಗೆ ಗೊತ್ತಿರುವಷ್ಟು ವಿಚಾರವನ್ನು ಅವರು ಹೇಳಿದ್ದಾರೆ. ಅಲ್ಲದೆ ತಮಗೇನಾದರೂ ವಿಷಯಗಳು ಗೊತ್ತಿದ್ದರೆ ಹೇಳಿ ಎಂದೂ ಹೇಳಿದ್ದಾರೆ. ಮತ್ತೇ ಇದರ ಮೇಲೆ ಏನು ಹೇಳಬೇಕು?

ಶ್ರೀ ಡಿ. ದೇವರಾಜ ಅರಸ್.—ಜನತಾ ಅಭಿಪ್ರಾಯವೂ ಇದೆ. ತಾವು ಈ ರೀತಿ ಮಾತನಾಡಿಕೊಂಡು ಹೋದರೆ ದೇಶದಲ್ಲಿ ಯಾವ ಜನರೂ ನಂಬಿಕೆಗೆ ಅರ್ಹರಲ್ಲ ಎನ್ನುವ ಸ್ಥಿತಿಗೆ ಬರಬೇಕಾಗುತ್ತದೆ. ಪೋಲೀಸರನ್ನು ಯಾರನ್ನೂ ನಂಬಬೇಡಿ ಎಂದು ಹೇಳುತ್ತೀರಾ? ಹೀಗೆ ಹೇಳುವುದಕ್ಕೆ ಹೋಗಬೇಡಿ. ಅದು ತಮಗೆ ತಿರುಗಿಕೊಂಡುಬಿಟ್ಟೀತು; ಎಲ್ಲದರಲ್ಲಿಯೂ ಯೋಗ್ಯರು ಇದ್ದಾರೆ, ತಪ್ಪು ಮಾಡುವವರೂ ಇದ್ದಾರೆ. If there is any evidence against these officers, namely, the D S Ps of this area who have directly taken up the investigation, which could to a certain extent be relied upon by him, let him kindly pass it on to me and I will look into it.

ಶ್ರೀ ಎಸ್. ಬಂಗಾರಪ್ಪ.—ನನಗೆ ಅನುಮಾನ ಬಂದಿರುವುದು ಏನೆಂದರೆ, ಇಂಥ ಕೇಸುಗಳಲ್ಲಿ ಸಾಮಾನ್ಯವಾಗಿ ಪೋಲೀಸರು ಸಂಬಂಧಪಟ್ಟ ಜನರನ್ನು ತಮ್ಮ ಕಸ್ಟಡಿಗೆ ತೆಗೆದುಕೊಳ್ಳುತ್ತಾರೆ. ಆದರೆ ಈ ಕೇಸಿನಲ್ಲಿ ಇವರು ಯಾರನ್ನೂ ಕಸ್ಟಡಿಗೆ ತೆಗೆದುಕೊಂಡಿಲ್ಲ. ಎನ್ನುವುದು ನಮ್ಮ ಅನುಮಾನ ಕೆಲವು ಸಂದರ್ಭದಲ್ಲಿ ಸೀನ್ ಆಫ್ ಆಕರೆನ್ಸ್‌ನಲ್ಲಿ ಕೆಲವು ಜನರನ್ನು ಕಸ್ಟಡಿಗೆ ತೆಗೆದುಕೊಳ್ಳುತ್ತಾರೆ ಸೆಕ್ಷನ್ 107 ಪ್ರಕಾರ ಕೆಲವರನ್ನು ಅರೆಸ್ಟ್ ಕೂಡ ಮಾಡುತ್ತಾರೆ. ಇದು ಅವರು ಕೊಶ್ಚನ್ ಮಾಡುವುದಕ್ಕೋಸ್ಕರ. ನಂತರ ಅವರ ಸ್ಟೇಟ್‌ಮೆಂಟನ್ನು ರಿಕಾರ್ಡು ಮಾಡುತ್ತಾರೆ. ಆದರೆ ಇಲ್ಲಿ that is not the case here. Since the beginning of this incident, they are free. There is no trouble or worry at all for them. ಇದೇ ರೀತಿ ಎಲ್ಲಾ ಕೇಸುಗಳಲ್ಲಿ, ಯಾರನ್ನೂ ಅರೆಸ್ಟ್ ಮಾಡದೆ, ಕೊಶ್ಚನ್ ಮಾಡದೆ ಹಾಗೆ ಬಿಡುತ್ತೀರಾ? ಎಲ್ಲಾ ಕೇಸುಗಳಿಗೂ ಇದನ್ನೇ ಅನುಸರಿಸುತ್ತೇವೆಂದು ತಾವು ಒಪ್ಪುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಎಲ್ಲಾ ಕೇಸುಗಳಲ್ಲಿಯೂ, ತಕ್ಷಣ ತಮ್ಮ ಮನೆಯವರು ಸತ್ತುಹೋದರು ಎಂದು ಸಂಬಂಧಪಟ್ಟವರು ಯಾರೂ ಬಂದು ಹೇಳುವುದಿಲ್ಲ. ಈ ಕೇಸಿನಲ್ಲಿ ನಮ್ಮ ರಿಪೋರ್ಟ್ ಪ್ರಕಾರ ಅವರು ಬಂದು ಹೇಳಿರುವುದು ನಿಜ. ಅವರ ಹೆಂಡತಿ ಬಂದು ಹೀಗೆ ಆಗಿದೆ ಎಂದು ಹೇಳಿದ್ದಾರೆ. ಪೋಲೀಸರಿಗೆ ಅವರ ಬಗ್ಗೆ ಏನಾದರೂ ಸಸ್ಪಿಷನ್ ಬಂದಾಗ ಅವರನ್ನು ಅರೆಸ್ಟ್ ಮಾಡುವುದಕ್ಕೆ ಅವರು ಹಿಂಜರಿಯುವುದಿಲ್ಲ. ಅಲ್ಲದೆ ಅವರು ತಪ್ಪಿಸಿಕೊಂಡು ಹೋಗುತ್ತಾರೆ ಎನ್ನುವ ಅನುಮಾನವೂ ಅವರಿಗೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ದೂರು ಕೊಡುವುದಕ್ಕೆ ಹೋದವರನ್ನು ಅರೆಸ್ಟ್ ಮಾಡಿರತಕ್ಕ ಸನ್ನಿವೇಶ ಇದೆ.

SRI D. DEVARAJ URS —Here they have not arrested in accordance their discretion. Each case depends upon its own merit.

ಶ್ರೀ ಕಾಗೋಡು ತಿಮ್ಮಪ್ಪ.—ಕಾಫೀ ಪ್ಲಾಂಟರ್ ರಾಜೇಶ್ ಅವರ ಪತ್ನಿಯನ್ನು ಪೋಲೀಸಿನವರು ಇಪತ್ತೈದು ಸಲಕ್ಕಿಂತಲೂ ಹೆಚ್ಚು ಸಲ ಕರೆಸಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಇದು ಸರಿಯಲ್ಲ. ಇಂಥ ಕೆಲಸವನ್ನು ಪೋಲೀಸಿನವರು ಮಾಡಬಾರದು. ಇದು ಸರಿಯಲ್ಲ. ಇದನ್ನು ಮುಖ್ಯಮಂತ್ರಿಗಳು ಒಪ್ಪುವುದಿಲ್ಲ. ಇದು ಸರಿಯಲ್ಲ ಎಂದು ಹೇಳಿದ್ದಾರೆ. ಪೋಲೀಸಿನವರು ಈ ರೀತಿ ಮಾಡಬಾರದು. ಇದು ಸರಿಯ

MADAM SPEAKER.-There are so many ifs, and buts.

SRI H. T. KRISHNAPPA.-The material so far collected does not indicate that they are going in the right direction.

SRI D. DEVARAJ URS.-I am sorry I cannot mobilize my friend who seems to think that they have already come to a conclusion.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಇನ್‌ವಾಲ್ವ್ ಆಗಿರುವರು ದೊಡ್ಡವರು ವ್ಯಾಗಿಟೀ ಪನ್ನಿನವರು ಸ್ವಾಮಿ.....

SRI D. DEVARAJ URS.-These are friends who have taken the side of the diseased person.

HON. MEMBERS.- No, no.

SRI D. DEVARAJ URS.—Who according to them is supposed to have been murdered by anybody. They are free to hold their opinion. I cannot help. If you really have any evidence, which can be relied upon I have made it clear that they can kindly supply. I am prepared to talk with them and take them. Beyond that, what is the use of talking like this?

SRI H. T. KRISHNAPPA.-Is it your idea that we have to take the role of investigation?

Karnataka Agricultural Income Tax (Amendment) Bill 1975 Introduction.

MADAM SPEAKER.-I have received the recommendation of the Governor for the introduction of the Karnataka Agricultural Income Tax (Amendment) Bill, 1975, in pursuance of clause I and II of Art. 207 of the Constitution of India.

SRI M. Y. GHORPADE.-I move:

" That leave be granted to introduce the Karnataka Agricultural Income Tax (Amendment) Bill, 1975 "

SRI T. R. SHAMANNA.—I have an objection to raise. Income tax is a Central Subject. Therefore,in what respect this can be introduced by the State Government? Under the guise of agricultural income tax so many other taxes in that form may be brought. To that extent the income tax may be reduced and it may reduce the State's revenue Some other taxes also are assessable as income tax.

SRI M. Y. GHORPADE.—The power to tax income from agriculture clearly belongs to the State Government. Agricultural Income Tax has been in existence for several years. The hon. member need not fear that in the name of agricultural income tax, we will resort to taxes which are not within the purview of the State. If such a thing happens, he can raise objection.